# ಕರ್ನಾಟಕ ಆರೋಗ್ಯ ಉಪಕರ ಅಧಿನಿಯಮ, 1962

(ಕರ್ನಾಟಕ ರಾಜ್ಯಪತ್ರ, ಗುರುವಾರ, ಏಪ್ರಿಲ್ 27, 2006, ಭಾಗ – IVಎ, ಪುಟ 605 ರಿಂದ 607ರ ವರೆಗೆ ಪ್ರಕಟಿಸಲಾಗಿದೆ.)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಆರೋಗ್ಯ ಉಪಕರ ವಿಧಿಸುವುದು
4. ಆರೋಗ್ಯ ಉಪಕರ ವಸೂಲಿ

4ಎ. ಆರೋಗ್ಯ ಉಪಕರದ ವಸೂಲಿಗೆ ತಗಲುವ ಖರ್ಚಿನ ಬಗ್ಗೆ ಹಕ್ಕುಳ್ಳ ಸ್ಥಳೀಯ ಪ್ರಾಧಿಕಾರಿಗಳು

5. ಪೈಸೆಗೆ ಹತ್ತಿರವಾಗಿ ಉಪಕರವನ್ನು ವಸೂಲು ಮಾಡುವುದು
6. ಇತರೆ ಅಧಿನಿಯಮಗಳ ಮೇರೆಗೆ ವಿಧಿಸಿದ ಉಪಕರ ಬಾಧಕವಾಗದಿರುವುದು
7. ನಿಯಮಗಳ ರಚನಾಧಿಕಾರ
8. ನಿರಸನ


* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1962ರ ಅಧಿನಿಯಮ 28.–** ಮೈಸೂರು ಆರೋಗ್ಯ ಉಪಕರ ಅಧಿನಿಯಮ, 1951ರ ಉಪಬಂಧಗಳಿಗನುಸಾರವಾಗಿ, ಹಿಂದಿನ ಮೈಸೂರು ರಾಜ್ಯದ ಪ್ರದೇಶದಲ್ಲಿ ಭೂ ಕಂದಾಯದ ಎಲ್ಲಾ ಬಾಬುಗಳ ಮೇಲೆ ರೂಪಾಯಿಯಲ್ಲಿ ಅರ್ಧಾಣೆ ದರದಲ್ಲಿ ಆರೋಗ್ಯ ಉಪಕರವನ್ನು ವಿಧಿಸಲಾಗುತ್ತಿತ್ತು. ಅಧಿನಿಯಮದಲ್ಲಿ, ಕಂದಾಯದ ಇತರ ಬಾಬುಗಳ ಮೇಲೆ ಒಂದು ರೂಪಾಯಿಗೆ ಒಂದು ಆಣೆಯನ್ನು ಮೀರದಂತೆ ಉಪಕರ ವಿಧಿಸುವ ಉಪಬಂಧಗಳೂ ಇವೆ. ವಿಲೀನಗೊಂಡ ಬಾಂಬೆ, ಕೂರ್ಗ್, ಹೈದ್ರಾಬಾದ್ ಮತ್ತು ಮದ್ರಾಸ್ ಪ್ರದೇಶಗಳಲ್ಲಿ ಯಾವುದೇ ಆರೋಗ್ಯ ಉಪಕರವನ್ನು ವಿಧಿಸುತ್ತಿಲ್ಲ. ರಾಜ್ಯದ ಪ್ರಜೆಗಳಿಗೆ ಸಾಕಷ್ಟು ಆರೋಗ್ಯ ಸೇವೆಯನ್ನು ಒದಗಿಸಲು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಹೊಸ ಮೈಸೂರು ರಾಜ್ಯದಾದ್ಯಂತ ಈ ಉಪಕರವನ್ನು ವಿಧಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಇಡೀ ರಾಜ್ಯಕ್ಕೆ ಅನ್ವಯಿಸುವಂಥ ಸೂಕ್ತ ಅಧಿನಿಯಮಿತಿಗಳನ್ನು ಮಾಡಿದ ಹೊರತು, ವಿಲೀನಗೊಂಡ ಪ್ರದೇಶಗಳಲ್ಲಿ ಯಾವುದೇ ಉಪಕರವನ್ನು ವಿಧಿಸುವಂತಿಲ್ಲ.

ಆದ್ದರಿಂದ ಈ ವಿಧೇಯಕ.

(ದಿನಾಂಕ 27ನೇ ಆಗಸ್ಟ್ 1962ರ ಕರ್ನಾಟಕ ರಾಜ್ಯ ಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ ದಲ್ಲಿ ಪುಟ 5 ರಲ್ಲಿ ಸಂಖ್ಯೆ 165ನ್ನು ಪ್ರಕಟಿಸಲಾಗಿದೆ).

### II

**1968ರ ತಿದ್ದುಪಡಿ ಮಾಡುವ ಅಧಿನಿಯಮ 19.–** ನೀರಿನ ದರದ ಮೇಲೆ ಆರೋಗ್ಯ ಉಪಕರವನ್ನು ವಿಧಿಸುವುದಕ್ಕೆ ಸಂಬಂಧಪಟ್ಟ ಮೈಸೂರು ಆರೋಗ್ಯ ಉಪಕರ ಅಧಿನಿಯಮ,1962ರ (1962ರ ಮೈಸೂರು ಅಧಿನಿಯಮ 28) ಅನುಸೂಚಿ–ಎ ನ 1ನೇ ಬಾಬಿನ ವಿವರಣೆ ಮತ್ತು ಸದರಿ ಅನುಸೂಚಿಯ 2ನೇ ಬಾಬುಗಳನ್ನು ನ್ಯಾಯಾಲಯಗಳ ಕೆಲವು ತೀರ್ಪುಗಳಲ್ಲಿ ಅಸಿಂಧುವೆಂದು ಪರಿಗಣಿಸಲಾಗಿದೆ ಎತ್ತಿಹಿಡಿಯಲಾಗಿದೆ. ಇದನ್ನು ದೃಷ್ಟಿಯಲ್ಲಿರಿಸಿಕೊಂಡು, ಸದರಿ ಅನುಸೂಚಿಯಿಂದ ಅವುಗಳನ್ನು ಬಿಟ್ಟುಬಿಡುವುದೆಂದು ಉದ್ದೇಶಿಸಲಾಗಿದೆ. ಅನುಸೂಚಿ–'ಎ'ನ 3ನೇ ಬಾಬಿನ ಮೇರೆಗೆ ವಿಧಿಸಿದ ಆರೋಗ್ಯ ಉಪಕರವು ಚಲನಚಿತ್ರ ಪ್ರದರ್ಶನಗಳಿಗೆ ಮಾತ್ರವೆಂದು ಸ್ಪಷ್ಟಪಡಿಸಬೇಕೆಂದೂ ಉದ್ದೇಶಿಸಲಾಗಿದೆ. ಅಲ್ಲದೆ, ' ನಯಾ ಪೈಸೆ ' ಯ ಉಲ್ಲೇಖವನ್ನು 'ಪೈಸೆ' ಯ ಅಭಿವ್ಯಕ್ತಿಯಲ್ಲಿ ಮಾಡಬೇಕೆಂದು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 26ನೇ ಏಪ್ರಿಲ್ 1968ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV 2ಎ ನ ಪುಟ 42 ರಲ್ಲಿನ ಸಂಖ್ಯೆ 698ರಲ್ಲಿ ಪ್ರಕಟಿಸಲಾಗಿದೆ).

### III

**1976ರ ತಿದ್ದುಪಡಿ ಮಾಡುವ ಅಧಿನಿಯಮ33.–** ಪ್ರಸ್ತುತ ಒಂದು ರೂಪಾಯಿಗೆ 5 ಪೈಸೆಯಂತೆ ಶಿಕ್ಷಣ ಉಪಕರವನ್ನು ಮತ್ತು ಒಂದು ರೂಪಾಯಿಗೆ 9 ಪೈಸೆಯಂತೆ ಆರೋಗ್ಯ ಉಪಕರವನ್ನು, ಭೂ ಕಂದಾಯ, ಅಬಕಾರಿ ಸುಂಕ ಮತ್ತು ಮುನಿಸಿಪಾಲಿಟಿಗಳು ವಸೂಲು ಮಾಡುವ ಸ್ವತ್ತು ಹಾಗೂ ವೃತ್ತಿ ತೆರಿಗೆಗಳ ಮೇಲೆ ವಿಧಿಸಲಾಗಿದೆ.

ಸದರಿ ದರಗಳು ಬಹು ಹಿಂದೆ ನಿಗದಿಪಡಿಸಿದವುಗಳಾಗಿವೆ. ವಿಶೇಷವಾಗಿ, ಮಧ್ಯಾಹ್ನದ ಊಟದ ಮೂಲಕ ಶಾಲಾ ಮಕ್ಕಳಿಗೆ ಪೌಷ್ಠಿಕ ಆಹಾರ ನೀಡುವುದಕ್ಕೆ ಸಂಬಂಧಿಸಿದಂತೆ ಹೆಚ್ಚುತ್ತಿರುವ ವೆಚ್ಚಗಳನ್ನು ಭರಿಸಲು ಮತ್ತು

ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳ ನಿರ್ಮಾಣದಂಥ ತೀವ್ರಗೊಳಿಸಬೇಕಾದ ಯೋಜನೆಗಳ ವೆಚ್ಚಗಳನ್ನು ಭರಿಸಲು ರಾಜ್ಯದ ವರಮಾನ ಹೆಚ್ಚಿಸುವ ಅಗತ್ಯವಿದೆ.

ಆದ್ದರಿಂದ, ಶಿಕ್ಷಣ ಉಪಕರ ಹಾಗೂ ಆರೋಗ್ಯ ಉಪಕರವನ್ನು ಹೆಚ್ಚಿಸುವುದಕ್ಕಾಗಿ, ಅನುಕ್ರಮವಾಗಿ, ಕರ್ನಾಟಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅಧಿನಿಯಮ, 1961 ಮತ್ತು ಕರ್ನಾಟಕ ಆರೋಗ್ಯ ಉಪಕರ ಅಧಿನಿಯಮ, 1962ಕ್ಕೆ ತಿದ್ದುಪಡಿ ತರಬೇಕೆಂದು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 30ನೇ ಮಾರ್ಚ್, 1976ರ ಕರ್ನಾಟಕ ರಾಜ್ಯ ಪತ್ರ (ವಿಶೇಷ ಸಂಚಿಕೆ) ಭಾಗ – IV 2ಎ ದಲ್ಲಿ ಪುಟ 3 ರಲ್ಲಿ ಸಂಖ್ಯೆ 1743ನ್ನು ಪ್ರಕಟಿಸಲಾಗಿದೆ.)

1962ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 28

(1962ರ ಸೆಪ್ಟಂಬರ್ ಇಪ್ಪತ್ತೆರಡನೇ ದಿನಾಂಕದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲು ಪ್ರಕಟವಾಗಿದೆ.)

# [1][ಕರ್ನಾಟಕ][1] ಆರೋಗ್ಯ ಉಪಕರ ಅಧಿನಿಯಮ, 1962

(1962ರ ಸೆಪ್ಟೆಂಬರ್ ಇಪ್ಪತ್ತೆರಡನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ).

(ಕರ್ನಾಟಕ ಅಧಿನಿಯಮ 1968ರ 19 ಮತ್ತು 1976ರ 33 ಇವುಗಳಲ್ಲಿ ತಿದ್ದುಪಡಿಯಾದಂತೆ.)

[1][ಕರ್ನಾಟಕ ರಾಜ್ಯ][1] ದಲ್ಲಿ ಕಂದಾಯದ ಕೆಲವು ಬಾಬುಗಳ ಮೇಲೆ ಆರೋಗ್ಯ ಉಪಕರವನ್ನು ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

[1][ಕರ್ನಾಟಕ ರಾಜ್ಯ][1] ದಲ್ಲಿ ಕಂದಾಯದ ಕೆಲವು ಬಾಬುಗಳ ಮೇಲೆ ಆರೋಗ್ಯ ಉಪಕರವನ್ನು ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಹದಿಮೂರನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಿದೆ:-

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು [1][ಕರ್ನಾಟಕ][1] ಆರೋಗ್ಯ ಉಪಕರ ಅಧಿನಿಯಮ, 1962 ಎಂದು ಕರೆಯತಕ್ಕದ್ದು.

(2) ಇದು, ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, 1962ನೇ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ,-

(1) "ಸ್ಥಳೀಯ ಪ್ರಾಧಿಕಾರ" ಎಂದರೆ ನಗರಸಭೆ, ನಗರಸಭಾಸಮಿತಿ, ನಗರ ಸಮಿತಿ, ನಗರ ಪರಿಷತ್ತು, ಪೌರ ನಗರ ಪರಿಷತ್ತು, ನೈರ್ಮಲ್ಯ ಅಥವಾ ಪಟ್ಟಣಮಂಡಲಿ ಅಧಿಸೂಚಿತ ಪ್ರದೇಶ ಸಮಿತಿ, ತಾಲ್ಲೂಕು ಅಭಿವೃದ್ಧಿ ಮಂಡಳಿ, ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಸ್ವಯಂ ಸರ್ಕಾರ ಅಥವಾ ಗ್ರಾಮಾಡಳಿತದ ಉದ್ದೇಶಕ್ಕಾಗಿ ಸ್ಥಾಪಿತವಾದ ಯಾವುದೇ ಪ್ರಾಧಿಕಾರ;

(2) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ.

**3. ಆರೋಗ್ಯ ಉಪಕರ ವಿಧಿಸುವುದು.**-

(i) ಭೂ ಕಂದಾಯದ ಎಲ್ಲಾ ಬಾಬುಗಳ ಮೇಲೆ;

(ii) ಅನುಸೂಚಿ 'ಎ' ಯಲ್ಲಿ ನಮೂದಿಸಲಾದ ರಾಜ್ಯ ವರಮಾನಗಳ ಬಾಬುಗಳ ಮೇಲೆ; ಮತ್ತು

(iii) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಳೀಯ ಪ್ರಾಧಿಕಾರವು ವಿಧಿಸುವಂಥ ಅನುಸೂಚಿ-ಬಿ ಯಲ್ಲಿ ನಮೂದಿಸಲಾದ ತೆರಿಗೆಗಳ ಬಾಬುಗಳ ಮೇಲೆ,

-ರೂಪಾಯಿಗೆ [1][ಹದಿನೈದು ಪೈಸೆ][1] ದರದಲ್ಲಿ ಆರೋಗ್ಯ ಉಪಕರವನ್ನು ವಿಧಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು.

1. 1976ರ ಅಧಿನಿಯಮ 33ರ ಮೂಲಕ 1.4.1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**4. ಆರೋಗ್ಯ ಉಪಕರ ವಸೂಲಿ.**- 3ನೇ ಪ್ರಕರಣದ ಮೇರೆಗೆ ಸಂದಾಯಮಾಡಬೇಕಾದ ಆರೋಗ್ಯ ಉಪಕರವನ್ನು, ಅಂಥ ಕಂದಾಯವನ್ನು ವಿಧಿಸಬೇಕಾದ ಭೂ ಕಂದಾಯ, ರಾಜ್ಯ ಕಂದಾಯ ಅಥವಾ ತೆರಿಗೆಯ ಎಲ್ಲ ಬಾಬುಗಳೊಂದಿಗೆ ವಿಧಿಸತಕ್ಕದ್ದು, ನಿರ್ಧರಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಲಾದ ಅಥವಾ ಹೊರಡಿಸಲಾದ ನಿಯಮಗಳು, ಆದೇಶಗಳು, ಅಧಿಸೂಚನೆಗಳು, ಭೂ ಕಂದಾಯ, ರಾಜ್ಯ ವರಮಾನ ಅಥವಾ ತೆರಿಗೆಯ ಸದರಿ ಬಾಬುಗಳ ಸಂಬಂಧದಲ್ಲಿ ಕರ ವಿಧಿಸುವುದಕ್ಕೆ, ನಿರ್ಧರಿಸುವದಕ್ಕೆ ಮತ್ತು ವಸೂಲು ಮಾಡುವುದಕ್ಕೆ ಸಂಬಂಧಿಸಿದಂತೆ ಅವು ಅನ್ವಯವಾಗುವಂತೆಯೇ ಆರೋಗ್ಯ ಉಪಕರವನ್ನು ವಿಧಿಸುವುದಕ್ಕೆ, ನಿರ್ಧರಿಸುವುದಕ್ಕೆ ಮತ್ತು ವಸೂಲು ಮಾಡುವುದಕ್ಕೆ ಅನ್ವಯಿಸತಕ್ಕದ್ದು.

[1][**4ಎ. ಆರೋಗ್ಯ ಉಪಕರದ ವಸೂಲಿಗೆ ತಗಲುವ ಖರ್ಚಿನ ಬಗ್ಗೆ ಹಕ್ಕುಳ್ಳ ಸ್ಥಳೀಯ ಪ್ರಾಧಿಕಾರಗಳು.**- ಈ ಅಧಿನಿಯಮದ ಮೇರೆಗೆ ಆರೋಗ್ಯ ಉಪಕರವನ್ನು ಸ್ಥಳೀಯ ಪ್ರಾಧಿಕಾರವು ವಸೂಲು ಮಾಡಿದಲ್ಲಿ, ಅಂಥ ಸ್ಥಳೀಯ ಪ್ರಾಧಿಕಾರವು ವಸೂಲಾದ ಹಣದ ಶೇಕಡಾ ಹತ್ತರಷ್ಟು ಮೊತ್ತವನ್ನು ವಸೂಲಿಗೆ ತಗುಲಿದ ಖರ್ಚಿಗಾಗಿ ಕಡಿತಗೊಳಿಸಲು ಹಕ್ಕುಳ್ಳದ್ದಾಗಿರತಕ್ಕದ್ದು ಮತ್ತು ಉಳಿದ ಹಣವನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.][1]

1. 1968ರ ಅಧಿನಿಯಮ 19ರ ಮೂಲಕ 7.11.1968 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**5. [1][ಪೈಸೆಗೆ][1] ಹತ್ತಿರವಾಗಿ ಉಪಕರವನ್ನು ವಸೂಲು ಮಾಡುವುದು.–** ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಆರೋಗ್ಯ ಉಪಕರದ ಹಣವನ್ನು ನಿರ್ಧರಿಸುವಲ್ಲಿ, ಅರ್ಧ [1][ಪೈಸೆ][1] ಗಿಂತ ಕಡಿಮೆಯಿರುವ [1][ಪೈಸೆ][1] ಯ ಭಾಗವನ್ನು ಪರಿಗಣಿಸತಕ್ಕದ್ದಲ್ಲ ಮತ್ತು [1][ಪೈಸೆ][1] ಯ ಭಾಗವನ್ನು ಅಥವಾ ಅರ್ಧ ಪೈಸೆಗೆ ಸಮನಾದ ಅಥವಾ ಅರ್ಧ [1][ಪೈಸೆ][1] ಯನ್ನು ಮೀರಿದ ಭಾಗವನ್ನು ಒಂದು [1][ಪೈಸೆ][1] ಯಂತೆ ಪರಿಗಣಿಸತಕ್ಕದ್ದು.

1. 1968ರ ಅಧಿನಿಯಮ 19ರ ಮೂಲಕ 7.11.1968 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6. ಇತರ ಅಧಿನಿಯಮಗಳ ಮೇರೆಗೆ ವಿಧಿಸಿದ ಉಪಕರ ಬಾಧಕವಾಗದಿರುವುದು.–** ಈ ಅಧಿನಿಯಮದಲ್ಲಿರುವುದು ಯಾವುದೂ, ಇತರ ಯಾವುದೇ ಅಧಿನಿಯಮದ ಉಪಬಂಧಗಳ ಕಾರ್ಯಾಚರಣೆಗೆ ಬಾಧಕವಾಗತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೇರೆಗೆ ವಿಧಿಸಿದ ಆರೋಗ್ಯ ಉಪಕರವು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ವಿಧಿಸಬಹುದಾದ ಇತರ ಯಾವುದೇ ಕರ ಅಥವಾ ಉಪಕರಕ್ಕೆ ಪೂರಕವಾಗಿರತಕ್ಕದ್ದು ಮತ್ತು ಅದರ ಬದಲಿಗೆ ಇರತಕ್ಕದ್ದಲ್ಲ.

**7. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ನಿಕಟೋತ್ತರ ಅಧಿವೇಶನದಲ್ಲಿ ಅಡಕಗೊಳ್ಳಬಹುದಾದ ಒಟ್ಟು ಮುವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಇದನ್ನು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮೊದಲು, ಆ ನಿಯಮಗಳಲ್ಲಿ ಯಾವುದೇ ಮಾರ್ಪಾಡುಗಳನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಸದರಿ ನಿಯಮಗಳನ್ನು ರಚಿಸಬಾರದೆಂದು ಒಪ್ಪಿದರೆ, ಆ ತರುವಾಯ, ಆ ನಿಯಮವು ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಜಾರಿಗೆ ತರತಕ್ಕದ್ದು ಅಥವಾ ಸಂದರ್ಭಾನುಸಾರ ಜಾರಿಗೆ ತರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕೃತ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**8. ನಿರಸನ.–** ಮೈಸೂರು ಆರೋಗ್ಯ ಉಪಕರ ಅಧಿನಿಯಮ, 1951 (1951ರ ಮೈಸೂರು ಅಧಿನಿಯಮ ಸಂಖ್ಯೆ XVIII) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

## ಅನುಸೂಚಿ –ಎ

1. ರಾಜ್ಯದಲ್ಲಿ ತಯಾರಿಸಿದ ಅಥವಾ ಉತ್ಪಾದಿಸಿದ ಈ ಕೆಳಗಿನ ಸರಕುಗಳ ಮೇಲೆ ರಾಜ್ಯದ ಯಾವುದೇ ಪ್ರದೇಶದಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಾಜ್ಯವು ವಿಧಿಸಬಹುದಾದ ಅಬಕಾರಿ ಸುಂಕ ಮತ್ತು ಇತರೆಡೆಯಲ್ಲಿ ತಯಾರಿಸಲಾದ ಅಥವಾ ಉತ್ಪಾದಿಸಲಾದ ಅಂಥವೇ ಸರಕುಗಳ ಮೇಲೆ ವಿಧಿಸಬಹುದಾದ ಪ್ರತಿಸುಂಕ:–

(ಎ) ಮಾನವ ಬಳಕೆಗಾಗಿ ಮದ್ಯಸಾರದ ಪಾನೀಯಗಳು.

(ಬಿ) ಅಫೀಮು, ಭಾರತೀಯ ಗಾಂಜಾ ಮತ್ತು ಇತರೆ ಮಂಪರು ತರಿಸುವ ಔಷಧಗಳು ಮತ್ತು ನಿದ್ರಾಜನಕಗಳು.

[1][ವಿವರಣೆ XXX][1]

1. 1968ರ ಅಧಿನಿಯಮ 19ರ ಮೂಲಕ 7.11.1968 ರಿಂದ ಜಾರಿಗೆ ಬರುವಂತೆ ಲೋಪಿಸಲಾಗಿದೆ.

[1][2. XXX][1]

1. 1968ರ ಅಧಿನಿಯಮ 19ರ ಮೂಲಕ 7.11.1968 ರಿಂದ ಜಾರಿಗೆ ಬರುವಂತೆ ಲೋಪಿಸಲಾಗಿದೆ.

3. [1][ [2][ಕರ್ನಾಟಕ][2] ಮನರಂಜನಾ ತೆರಿಗೆ ಅಧಿನಿಯಮ, 1958ರ 4ನೇ ಪ್ರಕರಣದ ಮೇರೆಗೆ][1] ಚಲನ ಚಿತ್ರ ಪ್ರದರ್ಶನಗಳ ಮೇಲೆ ರಾಜ್ಯವು ವಿಧಿಸಬಹುದಾದ ತೆರಿಗೆ.

1. 1968ರ ಅಧಿನಿಯಮ 19ರ ಮೂಲಕ 1.4.1962 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅನುಸೂಚಿ–ಬಿ

ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಳೀಯ ಪ್ರಾಧಿಕಾರಗಳು ವಿಧಿಸಬಹುದಾದ ತೆರಿಗೆಗಳು ಈ ಕೆಳಗಿನಂತಿವೆ, ಎಂದರೆ:–

1. ಭೂಮಿಗಳ ಮತ್ತು ಕಟ್ಟಡಗಳ ಮೇಲಿನ ತೆರಿಗೆಗಳು.
2. ವಾಹನಗಳ ಮೇಲಿನ ತೆರಿಗೆಗಳು.

[1][3. XXX][1]

[2][3][2] ಜಾಹೀರಾತಿನ ಮೇಲಿನ ತೆರಿಗೆಗಳು.

1. 1976ರ ಅಧಿನಿಯಮ ಸಂಖ್ಯೆ 33ರ ಮೂಲಕ 1.4.1976 ರಿಂದ ಜಾರಿಗೆ ಬರುವಂತೆ ಲೋಪಿಸಲಾಗಿದೆ.
2. 1976ರ ಅಧಿನಿಯಮ ಸಂಖ್ಯೆ. 33ರ ಮೂಲಕ 1.4.1976 ರಿಂದ ಜಾರಿಗೆ ಬರುವಂತೆ ಪ್ರತಿ ಸಂಖ್ಯೆ ನೀಡಲಾಗಿದೆ.

* * *

The above translation of the Karnataka Health Cess Act, 1962 (Karnataka Act 28 of 1962) shall be authoritative text in the Kannada (Language under section 5A of the Karnataka Official Language Act, 1963 (Karnataka Act 26 of 1963).

GOVERNER OF KARNATAKA
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

ಪಿ.ಆರ್. 824